



ಸುದ್ದಿ ಸಂಚಯ

# ‘ವಿವೇಕ ಸ್ಮಾರಕ’ ಕಟ್ಟಡ ನಿರ್ಮಾಣದ ಭೂಮಿಪೂಜೆ

ಮೈಸೂರು ರಾಮಕೃಷ್ಣ ಆಶ್ರಮವು ನಿರ್ಮಾಣ ಮಾಡಲು ಉದ್ದೇಶಿಸಿರುವ ‘**ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ -ವಿವೇಕಸ್ಮಾರಕ**’ದ ಕಟ್ಟಡದ ಭೂಮಿಪೂಜೆ ೨೦೨೨ರ ಜುಲೈ ೬ರಂದು ಬೆಳಿಗ್ಗೆ ನೆರವೇರಿತು. ಸುತ್ತೂರು ಶ್ರೀಕ್ಷೇತ್ರದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಆದಿಚುಂಚನಗಿರಿ ಮಠದ ಮೈಸೂರು ಶಾಖೆಯ ಶ್ರೀಸೋಮಶೇಖರ ಸ್ವಾಮಿಗಳು ಹಾಗೂ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರ ದಿವ್ಯಸಾನ್ನಿಧ್ಯದಲ್ಲಿ ನಡೆದ ಈ ಶಂಕುಸ್ಥಾಪನೆಯನ್ನು ಕರ್ನಾಟಕ ಸರ್ಕಾರದ ಸಹಕಾರ ಸಚಿವರೂ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಎಸ್.ಟಿ. ಸೋಮಶೇಖರ್ ಅವರು ನೆರವೇರಿಸಿದರು. ವೇದಘೋಷ, ಹೋಮ, ಮಂತ್ರಗಳೊಂದಿಗೆ ಬೆಳಿಗ್ಗೆ ೯ರ ಸುಮಾರಿಗೆ ನಡೆದ ಈ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ರಾಮಕೃಷ್ಣ ಮಠ-ಮಿಷನ್ನಿನ ಹಾಗೂ ಭಾವಪ್ರಚಾರ ಪರಿಷತ್ತಿನ ವಿವಿಧ ಸಂನ್ಯಾಸಿಗಳು ಭಾಗವಹಿಸಿದ್ದರು.

ವೈದಿಕ ಪದ್ಧತಿಯ ಪ್ರಕಾರ ಪೂಜೆ, ಹೋಮಾದಿಗಳೊಂದಿಗೆ ಭೂಮಿಪೂಜೆ ನೆರವೇರಿದ ನಂತರ ಸಭಾಕಾರ್ಯಕ್ರಮ ನಡೆಯಿತು. ನಾಡಗೀತೆ, ಪ್ರಾರ್ಥನೆಗಳೊಂದಿಗೆ ಆರಂಭಗೊಂಡ ಸಭೆಯಲ್ಲಿ ಸುತ್ತೂರು ಹಾಗೂ ಆದಿಚುಂಚನಗಿರಿ ಸ್ವಾಮಿಗಳಲ್ಲದೆ ವಿವಿಧ ಜನಪ್ರತಿನಿಧಿಗಳು, ಗಣ್ಯರು ಹಾಗೂ ಸಾಹಿತಿಗಳು ಭಾಗವಹಿಸಿದ್ದರು. ಈ ಮಹತ್ಕಾರ್ಯದ ನಿರ್ಮಾಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಲ್ಲ ಬಗೆಯ ಸಹಕಾರಗಳನ್ನು ನೀಡುವುದಾಗಿ ಉಸ್ತುವಾರಿ ಸಚಿವರು ಭರವಸೆ ನೀಡಿದರು. ಸಭೆಯಲ್ಲಿ ಸಂಸದ ಪ್ರತಾಪಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಹಂಗಾಮಿ ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಾದೇಗೌಡ, ಸಾಹಿತಿಗಳಾದ ಡಾ. ಎಸ್.ಎಲ್.ಭೈರಪ್ಪ, ಡಾ. ಸಿ.ಪಿ.ಕೆ, ಡಾ.ಪ್ರಭುಪ್ರಸಾದ್, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ. ಹೇಮಂತ ಕುಮಾರ್ ಮುಂತಾದವರು ಭಾಗವಹಿಸಿದ್ದರು. ‘ವಿವೇಕಸ್ಮಾರಕ’ ಯೋಜನೆಯ ಮೂಲ ಮಾದರಿಯ ಉದ್ಘಾಟನೆಯನ್ನು ಸಂಸದ ಪ್ರತಾಪಸಿಂಹ ಅವರು ನೆರವೇರಿಸಿದರು. ಅನೇಕ ಮಂದಿ ಭಕ್ತರಿಂದಲೂ, ನಾಡಿನ ಗಣ್ಯರು ಹಾಗೂ ಹಿತೈಷಿಗಳಿಂದಲೂ, ಪತ್ರಕರ್ತರಿಂದಲೂ ತುಂಬಿದ್ದ ಸಭಾ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರ ಮೈಸೂರು ಭೇಟಿಯ ಐತಿಹಾಸಿಕ ಕ್ಷಣವನ್ನು ಹಲವು ಬಾರಿ ನೆನೆಪಿಸಿಕೊಳ್ಳಲಾಯಿತು.

ಮುಂಬರುವ ದಿನಗಳಲ್ಲಿ ನಿರ್ಮಾಣವಾಗಲಿರುವ ಈ ಕೇಂದ್ರದಲ್ಲಿ ಸುಸಜ್ಜಿತ ಗ್ರಂಥಾಲಯ ಮತ್ತು ವಾಚನಾಲಯ, ಸ್ವಾಮೀಜಿ ಜೀವನ-ಸಂದೇಶಗಳ ಪ್ರದರ್ಶನ, ಸಭಾಂಗಣ, ವ್ಯಕ್ತಿತ್ವ ವಿಕಸನ ತರಬೇತಿ, ಭಾಷಾ ಪ್ರಭುತ್ವ ತರಬೇತಿ, ಏಕಾಗ್ರತೆ ಮತ್ತು ಧ್ಯಾನ ತರಗತಿಗಳು, ಜೀವನ ಮೌಲ್ಯ ಸಂವರ್ಧನೆ ಶಿಬಿರಗಳು, ಯೋಗಾಸನ ತರಗತಿ ಇತ್ಯಾದಿ ಚಟುವಟಿಕೆಗಳು ನಡೆಯಲಿವೆ.





Managing Editor : Swami Muktidananda    Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020